**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**ಎಸ್.ಸಿ. ಸಂಖ್ಯೆಃ 39/2013**

ದಿನಾಂಕಃ 06.06.2022
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 31 ಪ್ರಾಸಾ - 13

| | | |
|---|---|---|
| ಹೆಸರು | ಃ | ಎಂ.ಜಿ.ರಾಮಕೃಷ್ಣ |
| ತಂದೆಯ ಹೆಸರು | ಃ | ಗಿಂಡಿಗೌಡ |
| ವಯಸ್ಸು | ಃ | 69 ವರ್ಷ |
| ಉದ್ಯೋಗ | ಃ | ನಿವೃತ್ತ ಎಸಿಪಿ |
| ವಾಸಸ್ಥಳ | ಃ | ಬೆಂಗಳೂರು |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿನಾಂಕ 07.09.2010 ರಿಂದ 06.09.2012 ರವರೆಗೆ ರಾಮನಗರ ಡಿವೈಎಸ್‌ಪಿ ಆಗಿ ಕೆಲಸ ಮಾಡಿದ್ದೆ.

2. ದಿನಾಂಕ 21.05.2012 ರಂದು ಕಡತವನ್ನು ಚಾಸಾ 30 ರವರಿಂದ ಪಡೆದು ಮುಂದುವರಿದ ತನಿಖೆ ಮಾಡಿರುತ್ತೇನೆ.

3. ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ, ಆ ಮನೆಯ ಕಚ್ಚಾ ನಕಾಶೆಯನ್ನು ತಯಾರಿಸಿದೆ. ಅದನ್ನು ನಿಶಾನೆ ಪಿ 27 ಎಂತಲೂ, ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಶಾನೆ ಪಿ 27(ಎ) ಎಂದು ಗುರುತಿಸಿದೆ.

4. ಆನಂತರ ದಿನಾಂಕ 22.05.2012 ರಂದು ಚಾಸಾ 7 ಮತ್ತು 8 ರವರ ಹೇಳಿಕೆ ಪಡೆದಿರುತ್ತೇನೆ. ದಿನಾಂಕ 25.05.2012 ರಂದು

ಚಾಸಾ 9 ರವರ ಹೇಳಿಕೆ ಪಡೆದಿರುತ್ತೇನೆ. ದಿನಾಂಕ 04.06.2012 ರಂದು ಚಾಸಾ 3, 4, 10 ಮತ್ತು 11 ರವರ ಹೇಳಿಕೆ ಪಡೆದಿರುತ್ತೇನೆ. ಅವರ ಪೈಕಿ ಚಾಸಾ 3 ಮತ್ತು 4 ರವರು ಕ್ರಮವಾಗಿ ಈಗ ಓದಿ ಹೇಳಿರುವ ನಿಶಾನೆ ಪಿ 21 ಮತ್ತು 17 ರಂತೆಯೇ ಹೇಳಿಕೆ ನೀಡಿರುತ್ತಾರೆ. ಆರೋಪಿ ಕರ್ತವ್ಯದಲ್ಲಿದ್ದ ಬಗ್ಗೆ ಘಟಕ ವ್ಯವಸ್ಥಾಪಕರು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ರವರಿಂದ ಒಂದು ದಾಖಲೆ ಪಡೆದಿರುತ್ತೇನೆ. ಆ ಪತ್ರವನ್ನು ನಿಶಾನೆ ಪಿ 28 ಎಂತಲೂ, ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಶಾನೆ ಪಿ 28(ಎ) ಎಂತಲೂ ಗುರುತಿಸಿದೆ.

5. ದಿನಾಂಕ 06.06.2012 ರಂದು ಚಾಸಾ 12 ಮತ್ತು 13 ರವರ ಹೇಳಿಕೆ ಪಡೆದಿರುತ್ತೇನೆ. ಅದೇ ದಿನ ಮೃತರ ನಿಶಾನೆ ಪಿ 24 ಮರಣೋತ್ತರ ಪರೀಕ್ಷಾ ವರದಿಯನ್ನು ಪಡೆದಿರುತ್ತೇನೆ. ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಶಾನೆ ಪಿ 24(ಎ) ಎಂತಲೂ ಗುರುತಿಸಿದೆ. ಆ ಸಮಯದಲ್ಲಿ ವೈದ್ಯರು ಸಂಗ್ರಹಿಸಿದ ವಸ್ತುಗಳನ್ನು ಪಡೆದಿರುತ್ತೇನೆ.

6. ದಿನಾಂಕ 16.06.2012 ರಂದು ಚಾಸಾ 5 ರವರ ಹೇಳಿಕೆ ಪಡೆದಿರುತ್ತೇನೆ. ದಿನಾಂಕ 29.06.2012 ರಂದು ಚಾಸಾ 15 ರವರ ಹೇಳಿಕೆ ಪಡೆದಿರುತ್ತೇನೆ. ಅದೇ ದಿನ ಆರೋಪಿ 3 ಮತ್ತು 5 ರವರು

ನಿರೀಕ್ಷಣಾ ಜಾಮೀನಿನ ಆದೇಶದೊಂದಿಗೆ ಹಾಜರಾದಾಗ ಅವರನ್ನು ದಸ್ತಗಿರಿ ಮಾಡಿ ಜಾಮೀನಿನ ಮೇಲೆ ಬಿಡುಗಡೆ ಗೊಳಿಸಿರುತ್ತೇನೆ.

7. ದಿನಾಂಕ 02.07.2012 ರಂದು ಚಾಸಾ 1 ರವರ ಮುಂದುವರಿದ ಹೇಳಿಕೆ ಮತ್ತು ಚಾಸಾ 2 ರವರ ಹೇಳಿಕೆ ಪಡೆದಿರುತ್ತೇನೆ. ಅದೇ ದಿನ ಚಾಸಾ 1 ರವರು ಹಾಜರುಪಡಿಸಿದ ನಿಶಾನೆ ಪಿ 11 ಲಗ್ನಪತ್ರಿಕೆ ಮತ್ತು ನಿಶಾನೆ ಪಿ 3 ರಿಂದ 10 ಫೋಟೋಗಳನ್ನು ಅಮಾನತು ಪಡಿಸಿಕೊಂಡಿರುತ್ತೇನೆ.

8. ಅದೇ ದಿನ ಆರೋಪಿ 1 ರವರು ನನ್ನ ಕಛೇರಿಗೆ ಹಾಜರಾಗಿ ಮೃತಳ ಒಡವೆಗಳು, ಬಟ್ಟೆ ಮತ್ತು ಒಂದು ಬೀರುವನ್ನು ಹಾಜರುಪಡಿಸಿರುತ್ತಾರೆ. ಅದನ್ನು ಸ್ವೀಕಾರ ಮಾಡಿ ಪಿರ್ಯಾದುದಾರರಿಗೆ ನೀಡಿರುತ್ತೇನೆ. ಆ ಸ್ವೀಕೃತಿಯನ್ನು ನಿಶಾನೆ ಪಿ 29 ಎಂದು ಗುರುತಿಸಿದೆ ಮತ್ತು ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಶಾನೆ ಪಿ 29(ಎ) ಎಂದು ಗುರುತಿಸಿದೆ.

9. ದಿನಾಂಕ 10.07.2012 ರಂದು ಚಾಸಾ 29 ರವರ ಹೇಳಿಕೆ ಪಡೆದಿರುತ್ತೇನೆ. ದಿನಾಂಕ 18.07.2012 ರಂದು ಚಾಸಾ 14, 16 ಮತ್ತು 17 ರವರ ಹೇಳಿಕೆ ಪಡೆದಿರುತ್ತೇನೆ.

10. ದಿನಾಂಕ 02.08.2012 ರಂದು ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ಸಲ್ಲಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ವಕೀಲರಾದ ಶ್ರೀಮತಿ.ಮಮತಾ ರವರು ಶ್ರೀ.ಬಿ.ರವೀಂದ್ರ ರ ಪರವಾಗಿ ಸಮಯ ಕೋರಿದ್ದು, ಈ ಪ್ರಕರಣ ಹಳೆಯ ಪ್ರಕರಣವಾಗಿದ್ದು, ಸಾಕ್ಷಿದಾರರು ನಿವೃತ್ತ ಹಿರಿಯ ಪೊಲೀಸ್ ಅಧಿಕಾರಿಯಾಗಿದ್ದು, ಬೆಂಗಳೂರಿನಿಂದ ಬಂದಿದ್ದು, ಆದ್ದರಿಂದ ಸಕಾರಣವಿಲ್ಲವೆಂದು ಅವರ ಕೋರಿಕೆ ತಿರಸ್ಕರಿಸಿ ಪಾಟೀಸವಾಲು ಮಾಡಿಲ್ಲ ಎಂದು ತೆಗೆದುಕೊಳ್ಳಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ದೇವರಾಜ ಭಟ್ಟ ಎಂ.)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.